ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

**PAPER CLIPPINGS**

ಶಾಖೆ / ವಿಷಯ : DEPARTMENT / SUBJECT: ಅಂತರಾಷ್ಟ್ರೀಯ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 10/1/20

# ಬ್ರೆಕ್ಸಿಟ್‌ಗೆ ಬ್ರಿಟನ್ ಸಂಸತ್ ಅಸ್ತು

» ಪರವಾಗಿ 330 ವಿರುದ್ಧವಾಗಿ 231 ಸಂಸದರು ಮತಚಲಾವಣೆ

ಲಂಡನ್: ಐರೋಪ್ಯ ಒಕ್ಕೂಟದಿಂದ ಬ್ರಿಟನ್ ಹೊರಬರುವ ಬ್ರೆಕ್ಸಿಟ್ ಮಸೂದೆಗೆ ಬ್ರಿಟನ್ ಸಂಸತ್ ಗುರುವಾರ ಅನುಮೋದನೆ ನೀಡಿದೆ. ಇದರಿಂದ ಸುಮಾರು ನಾಲ್ಕು ವರ್ಷದಿಂದ ಕಾಡುತ್ತಿದ್ದ ಬ್ರೆಕ್ಸಿಟ್ ಕಂಟಕದಿಂದ ಬ್ರಿಟನ್ ಹೊರಬಂದಿದೆ.

ಬ್ರೆಕ್ಸಿಟ್ ಮಸೂದೆಯ ಮೇಲೆ ಅಂತಿಮವಾಗಿ ನಡೆದ ಮತದಾನದಲ್ಲಿ ಪರವಾಗಿ 330 ಸಂಸದರು ಮತ್ತು ವಿರುದ್ಧವಾಗಿ 231 ಸಂಸದರು ಮತಚಲಾಯಿಸಿದರು. ಬ್ರೆಕ್ಸಿಟ್ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳಲು ಜನವರಿ 31ರವರೆಗೆ ಬ್ರಿಟನ್‌ಗೆ ಐರೋಪ್ಯ ಒಕ್ಕೂಟ ಗಡುವು ನೀಡಿತ್ತು.

ಬ್ರೆಕ್ಸಿಟ್ ಕಗ್ಗಂಟು ಪ್ರಧಾನಿಗಳಾಗಿದ್ದ ಡೇವಿಡ್ ಕ್ಯಾಮರಾನ್ ಮತ್ತು ಥೆರೇಸಾ ಮೇ ಅಧಿಕಾರಕ್ಕೆ ಸಂಚಕಾರ ತಂದಿತ್ತು. ಬಹುಮತದ ಕೊರತೆಯ ಕಾರಣ ಬೋರಿಸ್ ಜಾನ್ಸನ್ ಕೂಡ ಮೊದಲ ಪ್ರಯತ್ನದಲ್ಲಿ ವಿಫಲರಾಗಿದ್ದರು. ಆದರೆ, ಕಳೆದ ಡಿಸೆಂಬರ್‌ನಲ್ಲಿ ಸಂಸತ್‌ಗೆ ನಡೆದ ಮಧ್ಯಂತರ ಚುನಾವಣೆಯಲ್ಲಿ ಅವರ ಕನ್ಸರ್ವೆಟೀವ್ ಪಕ್ಷ ಬಹುಮತ ಪಡೆಯುವ ಮೂಲಕ ಬೋರಿಸ್ ಜಾನ್ಸನ್ ಮೇಲಿದ್ದ ದೊಡ್ಡ ಹೊರೆಯನ್ನು ಹಗುರಗೊಳಿಸಿತು. -ಪಿಟಿಐ